ಮೂಲ ದಾವಾ ಃ 124-2011 ಡಿಡಬ್ಲ್ಯು-1

ಸಾಕ್ಷಿಯನ್ನು ದಿನಾಂಕಃ 20.03.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

22. ಮುಂದುವರೆದ ಪಾಟಿ ಸವಾಲು ಃ ವಾದಿ ಪರ ಶ್ರೀ ಎನ್ ಎಸ್ ಯು ವಕೀಲರಿಂದ

ಫಕ್ರುಸಾಬ್ ನನ್ನ ತಾಯಿಯ ಅಣ್ಣ. ಫಕ್ರುಸಾಬ್‌ರವರ ತಾಯಿ ಆಶಾಬಿ. ಅರ್ ಎಸ್ ನಂ 268/ಎ/1ನೇದ್ದರ ಮೂಲ ಮಾಲೀಕರು ಫಕ್ರುಸಾಬ್ ಅಂದರೆ ಸರಿ. ಫಕ್ರುಸಾಬ್‌ರವರು ಸುಮಾರು 8 ರಿಂದ10 ವರ್ಷಗಳ ಹಿಂದೆ ತೀರಿಕೊಂಡರು. ಅಶಾಬಿ ರವರು ನನ್ನ ಮಾವ ಫಕ್ರುಸಾಬ್ ತೀರಿಕೊಂಡ

ನಂತರ ತೀರಿಕೊಂಡರು. ರಾಜ್‌ಬಿ ನನ್ನ ತಾಯಿ. ನಾವು 5 ಜನ ಮಕ್ಕಳು. ಮೂರು ಜನ ಅಕ್ಕ-ತಂಗಿಯರು, 2 ಜನ ಅಣ್ಣ-ತಮ್ಮಂದಿರು. ನಾವು ಬೇರೆ ಬೇರೆ ಇದ್ದೇವೆ. ನಾನು ಈಗ ಮ್ಯಾದಾರ್ ಓಣಿಯಲ್ಲಿರುತ್ತೇನೆ. ನನ್ನ ತಾಯಿ, ಅಣ್ಣ-ತಮ್ಮಂದಿರು ಮೊದಲು ಮ್ಯಾದಾರ್ ಓಣಿಯಲ್ಲಿದ್ದೇವು ಅಂದರೆ ಸರಿ. ಈ ಕೇಸು ದಾಖಲಾದಾಗ ನಾವು ಮ್ಯಾದಾರ್ ಓಣಿಯಲ್ಲಿರಲಿಲ್ಲ ನನ್ನ ತಾಯಿ ಮಾತ್ರ ಇದ್ದರು.

ನನ್ನ ತಾಯಿ ಮೂಲ ದಾವೆ 77/2011 ನ್ನು ದಾಖಲಿಸಿದ್ದ ಬಗ್ಗೆ ಮಾಹಿತಿ ಇಲ್ಲ. ನನ್ನ ತಕರಾರಿನಲ್ಲಿ ಹಾಗೂ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಮೂಲ ದಾವಾ 77/2011ರ ಬಗ್ಗೆ ಬರೆಯಲು ನಾನು ನನ್ನ ವಕೀಲರಿಗೆ ಮಾಹಿತಿಕೊಟ್ಟಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ವಾದ ಪತ್ರದ ಪ್ಯಾರಾ ನಂ 4 ರಲ್ಲಿರುವ ಅಂಶಗಳನ್ನು ಅಲ್ಲಗಳೆಯುತ್ತೇನೆ ಅಂತ ಬರೆಯಲಾಗಿದೆ ಅಂದರೆ ಸರಿ, ಪ್ಯಾರಾ 4 ರಲ್ಲಿ ಏನು ಬರೆಯಲಾಗಿದೆ ಅಂತ ಗೊತ್ತಿಲ್ಲ. ನಾನು ಹಾಗೂ ನನ್ನ ಅಣ್ಣ-ತಮ್ಮಂದಿರು ಚೆನ್ನಾಗಿ ಇದ್ದೇವೆ ಅಂದರೆ ಸರಿ. ಈ ದಾವೆ ಚಾಲ್ತಿಯಲ್ಲಿರುವ ಬಗ್ಗೆ ನನ್ನ ಅಣ್ಣ-ತಮ್ಮಂದಿರಿಗೆ ಮಾಹಿತಿ ಇದೆ. ನನ್ನ ಅಣ್ಣ-ತಮ್ಮಂದಿರು ಈ ದಾವೆಯಲ್ಲಿ ತಕರಾರು ಹಾಕಿಲ್ಲ ಅಂದರೆ ಸರಿ.

ಫಕ್ರುಸಾಬ್ ಹಾಗೂ ಅಶಾಬಿರವರು ದಾವಾ ಆಸ್ತಿಯ ಮನೆಯಲ್ಲಿದ್ದರು ಅಂದರೆ ಸರಿ. ಅಶಾಬಿರವರು ತೀರಿಕೊಳ್ಳುವ ಸಮಯದಲ್ಲಿ ಬಹಳ ವಯಸ್ಸಾಗಿತ್ತು ಅಂದರೆ ಸರಿ. ಫಕ್ರುಸಾಬ್‌ರವರಿಗೆ ದೈಹಿಕವಾಗಿ ಅರಾಮಾಗಿದ್ದರು ಅಂದರೆ ಸರಿ. ಅವರು ಹೊಲದ ಕೆಲಸವನ್ನು ಮಾಡುತ್ತಿದ್ದರು ಹಾಗೂ ಚುರುಮುರಿ ಅಂಗಡಿಯನ್ನು ನಡೆಸುತ್ತಿದ್ದರು. ಫಕ್ರುಸಾಬ್‌ರವರಿಗೆ ಎಷ್ಟು ಜಮೀನು ಇತ್ತು ಅಂತ ಹೇಳಲು ಬರುವುದಿಲ್ಲ, ಆದರೆ ಫಕ್ರುಸಾಬ್ ಹಾಗೂ ನಮ್ಮ ಅಮ್ಮನ ಹೆಸರಿನಲ್ಲಿಯು 3 ಎಕರೆ 24 ಗುಂಟೆ ಜಮೀನು ಇದ್ದವು. ಸದರಿ ಜಮೀನು ವಾಲಿಕಾರ್ ವೃತ್ತಿಯಿಂದ ಬಂದ ಜಮೀನು. ಹುಸೇನ್‌ಬಿ ಕೋಂ ಸೈದುಸಾಬ್ ಕೊಂಡವಾಡರವರು ನನ್ನ ಅಜ್ಜಿ ಅಶಾಬಿರವರ ಅಣ್ಣನ ಹೆಂಡತಿ. ಹುಸೇನ್‌ಬಿ ರವರು ದಾವಾ ಆಸ್ತಿ ಹಾಗೂ ಇತರೆ ಆಸ್ತಿಗಳನ್ನು ನಮಗೆ ಮಂಜೂರು ಮಾಡಬೇಕೆಂದು ಭೂ ನ್ಯಾಯಾ ಮಂಡಲಿಗೆ ಅರ್ಜಿ ಕೊಟ್ಟಿದ್ದರು ಅಂದರೆ ಸರಿಯಲ್ಲ. ಅರ್ ಎಸ್ ನಂ.267ರ ಉತ್ತರ ಭಾಗದ ಜಮೀನು 2 ಎಕರೆ ಜಮೀನು ಮಾತ್ರ ಮಂಜೂರು ಆಗಿತ್ತು. ದಾವಾ ಆಸ್ತಿ ಸೇರಿದಂತೆ ಉಳಿದ ಜಮೀನಿಗೆ ಹುಸೇನ್‌ಬಿ ರವರ ಅರ್ಜಿಯನ್ನು ವಜಾಗೊಳಿಸಲಾಗಿತ್ತು ಅಂದರೆ ಸರಿ. ಸದರಿ ಕೇಸಿನಲ್ಲಿ ಫಕ್ರುಸಾಬ್‌ರವರು ಜಮೀನಿನ ಮಾಲೀಕರು ಅಂತ ತೋರಿಸಿದ್ದರು ಅಂದರೆ ಗೊತ್ತಿಲ್ಲ. ಮೊಹಬೂಬ್ ಸಾಬ್ ಅಶಾಬಿ ರವರ ಗಂಡ ನನ್ನ ಅಜ್ಜ. ಅರ್ ಎಸ್ ನಂ 268/ಅ ನೇದ್ದರ ಜಮೀನು ಫಕ್ರುಸಾಬ್ ಮತ್ತು ಅಶಾಬಿ ರವರಿಗೆ ಸೇರಿದ 3 ಎಕರೆ 24 ಗುಂಟೆ ಜಮೀನು ಅಂದರೆ ಸರಿ.

ನನ್ನ ತಾಯಿ ಮೂಲ ದಾವಾ ನಂ 77/2011ರಲ್ಲಿ ಏನು ಮಾಗಣಿ ಕೇಳಿದ್ದರು ಅಂತ ಗೊತ್ತಿಲ್ಲ. ಫಕ್ರುಸಾಬ್‌ರವರು ಅವರ ಕೊನೆಯ ದಿನಗಳಲ್ಲಿ ದುಡಿಯಲು ಶಕ್ತಿ ಇರಲಿಲ್ಲ ಅಂದರೆ ಸರಿ. ಅವರನ್ನು ನೂರಜಾನ್‌ರವರೇ ನೋಡಿಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ, ನಾವೇ ನೋಡಿಕೊಳ್ಳುತ್ತಿದ್ದೇವು. ಅವರನ್ನು ದವಾಖಾನೆಗೆ ತೋರಿಸಿದ ಬಗ್ಗೆ ದಾಖಲೆಗಳು ಇಲ್ಲ. ಅವರನ್ನು ನಾನು ನೋಡಿಕೊಂಡಿದ್ದೆ ಅಂತ ತೋರಿಸಲು ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ಅವರು ನನ್ನ ತಾಬಾದಲ್ಲಿದ್ದರು ಅಂತ ತೋರಿಸಲು ಯಾವುದೇ ಕಾಗದ ಪತ್ರವನ್ನು ಕೊಟ್ಟಿಲ್ಲ. ನೂರ್‌ಜಾನ್‌ರವರು

ಅಶಾಬಿ ರವರಿಗೆ ಸಂಬಂಧಿಕರಲ್ಲ. ನಾನು ಮತ್ತು ವಾದಿ ಸಾಯಿರಾಬಾನ್ ರವರು ಸಂಬಂಧಿಕರು ಅಂದರೆ ಸರಿ. ನಮ್ಮ ಓಣಿಯ ಶ್ರೀಕಾಂತ ಕಟವ್‌ಕರ್, ರಾಮು ತಹಶೀಲ್ದಾರ್ ರವರು ಯಾರು ಅಂತ ಗೊತ್ತಿಲ್ಲ. ಅವರುಗಳು ಈ ದಾವೆಯಲ್ಲಿ ಸಾಕ್ಷ್ಯ ನುಡಿದಿದ್ದಾರೆ ಅಂದರೆ ಸರಿ. ನನಗೆ ಶ್ರೀಕಾಂತ ಕಟವ್‌ಕರ್, ರಾಮು ತಹಶೀಲ್ದಾರ್ ರವರು ಪರಿಚಯವಿದ್ದರು ಈಗ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಫಕ್ರುಸಾಬ್‌ರವರು ದಾವಾ ಆಸ್ತಿಯನ್ನು ನೂರ್‌ಜಾನ್‌ರವರಿಗೆ ಭಕ್ಷೀಸ್ ಕೊಟ್ಟಿದ ವಿಚಾರ ನಮಗೆ ಗೊತ್ತಿತ್ತು ಅಂದರೆ ಸರಿಯಲ್ಲ. ವಿಚಾರ ಗೊತ್ತಿದ್ದರು ಈಗ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆದರೆ ಕಾಗದ ಪತ್ರ ಮಾಡಿಕೊಟ್ಟಿರುವುದು ಸುಳ್ಳಾಗಿರುತ್ತದೆ.

ದಾವಾ ಆಸ್ತಿಯಲ್ಲಿ ವಾದಿ ಹುರುಳಿ ಬೆಳೆಯನ್ನು ಬೆಳೆದಿದ್ದಾರೆ ಅಂದರೆ ಸರಿಯಲ್ಲ. ಹಿಂದಿನ ವರ್ಷ ಗೋವಿನ ಜೋಳ ಬೆಳೆದಿದ್ದರು ಅಂದರೆ ಸರಿಯಲ್ಲ. ಮೊದಲಿನಿಂದಲೂ ನಾವೇ ಸ್ವಾಧೀನದಲ್ಲಿದ್ದು ಬೆಳೆ ತೆಗೆಯುತ್ತಿದ್ದೇವೆ. ದಾವಾ ಆಸ್ತಿ 1 ಎಕರೆ ಹೊರತುಪಡಿಸಿ ಉಳಿದ 2 ಎಕರೆ 24 ಜಮೀನಿನಲ್ಲಿ ನಾವು ಮೆಣಸಿನ ಬೆಳೆ ಬೆಳೆದಿದ್ದೇವೆ ಅಂದರೆ ಸರಿಯಲ್ಲ, ನಾವು ಪೂರ್ತಿ 3 ಎಕರೆ 24 ಜಮೀನಿಗೆ ಮೆಣಸಿನ ಬೆಳೆ ಹಾಕಿದ್ದೇವೆ ಅಂತ ನುಡಿಯುತ್ತಾರೆ. ನಾವು 3 ಎಕರೆ 24 ಗುಂಟೆ ಜಮೀನಿನಲ್ಲಿ ಮನೆ ಕಟ್ಟಿದ್ದೇವೆ. ಅಶಾಬಿ ಇದ್ದ ಮನೆ ಈಗ ಬಿದ್ದು ಹೋಗಿದೆ. ಆ ಮನೆಯ ಉತ್ತರ ದಿಕ್ಕಿಗೆ ನಮ್ಮ ಮನೆ ಕಟ್ಟಿದ್ದೇವೆ ಅಂದರೆ ಸರಿ.3 ಎಕರೆ 24 ಗುಂಟೆ ಜಮೀನಿನಲ್ಲಿ ಮನೆ ಕಟ್ಟಿದ್ದೇವೆ ಅಂತ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ